ಓಎಸ್. 296/2020 ಪಿಡಬ್ಲ್ಯೂಃ2

ದಿನಾಂಕಃ 29.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ ಎಸ್ ಎಸ್ ಆರ್ ವಕೀಲರಿಂದಃ**

ನನ್ನ ವಾದಕ್ಕೆ ಪೂರಕವಾಗಿ ಆರ್ ಟಿ ಸಿ ಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 5 ಎಂದು, ಪ್ರತಿವಾದಿಗಳಿಗೆ ನೀಡಿರುವ ವಕೀಲರ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 6 ಎಂದು, ಅಂಚೆ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 7 ಎಂದು, ಅಂಚೆ ಸ್ವೀಕೃತಿಯನುವ್ನ ಹಾಜರು ಪಡಿಸಿದ್ದು ಅದನ್ನು ನಿಪಿ 8 ಎಂದು, ಪ್ರತಿವಾದಿಗಳು ನೀಡಿರುವ ಪ್ರತ್ಯುತ್ತರ ನೋಟೀಸನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಜಿ ಎಸ್ ವಕೀಲರಿಂದಃ**

ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಮನೆ ಬಾಡಿಗೆ ಪಾವತಿ ಮಾಡದ ಬಗ್ಗೆ ಹೂಡಿರುತ್ತೇವೆ. ವಾದಪತ್ರದ ಎಲ್ಲಾ ಅಂಶಗಳನ್ನು ನಮ್ಮ ಅಣ್ಣ ಮಾದಶೆಟ್ಟಿಯವರು ಬರೆಯಿಸಿರುತ್ತಾರೆ. ವಾದಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. 2017 ರಲ್ಲಿ ನಮ್ಮ ತಂದೆ ತೀರಿಕೊಂಡ ಮೂರು ತಿಂಗಳ ನಂತರ ನಾವು ಪ್ರತಿವಾದಿಗಳನ್ನು ಬಾಡಿಗೆ ಹಣವನ್ನು ನೀಡುವಂತೆ ಕೇಳಿದ್ದು ಅದಕ್ಕೆ ಅವರು ಸದರಿ ಜಾಗ ತಮಗೆ ಸೇರಿದ್ದು ಬಾಡಿಗೆ ನೀಡುವುದಿಲ್ಲ ಎಂದು ತಿಳಿಸಿದರು. ದಿಃ17.04.2017 ರಂದು ನಮ್ಮ ತಂದೆ ತೀರಿಕೊಂಡಿರುತ್ತಾರೆ. ನಾವು ಪ್ರತಿವಾದಿಗಳನ್ನು ಜುಲೈ 2017 ರಲ್ಲಿ ಬಾಡಿಗೆ ಹಣ ನೀಡುವಂತೆ ಕೇಳಿರುತ್ತೇವೆ. ನನ್ನ ವಾದ ಪತ್ರದಲ್ಲಿ ಯಾವ ದಿನಾಂಕದಂದು ನಾವು ಬಾಡಿಗೆ ಹಣ ಕೇಳಿದ್ದೇವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ . ಈ ಬಗ್ಗೆ ದಿನಾಂಕ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಆ ಬಗ್ಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ.

2017 ರ ಜುಲೈನಿಂದ 2020 ರಲ್ಲಿ ಈ ದಾವೆ ಹೂಡುವ ತನಕ ಪ್ರತಿವಾದಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ನಾವು 2018 ರಲ್ಲಿ ನ್ಯಾಯಾಲಯಕ್ಕೆ ಈ ಬಗ್ಗೆ ದೂರು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿದ್ದೇವೆ ಎಂದು ನುಡಿಯುತ್ತಾರೆ. ನಾವು 2018 ರಲ್ಲಿ ನ್ಯಾಯಾಲಯಕ್ಕೆ ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ಭೂಮಿ ಅನ್ಯಕ್ರಾಂತ ಮಾಡಿದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ . ಮನೆಕಟ್ಟಲು ನಾವು ಗ್ರಾಮಪಂಚಾಯಿತಿಯಿಂದ ಯಾವುದೇ ಪರವಾನಿಗೆ ಪಡೆದಿಲ್ಲ. ದಾವಾ ಸ್ವತ್ತಿನಲ್ಲಿ ಮನೆಕಟ್ಟಿರುವ ಬಗ್ಗೆ ಯಾವುದೇ ಅಸೆಸ್ಮೆಂಟ್ ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ ಮನೆಗೆ ಕಂದಾಯ ಕಟ್ಟಿರುವುದಿಲ್ಲ ಬದಲಾಗಿ ಜಮೀನಿಗೆ ಕಂದಾಯ ಕಟ್ಟಿರುತ್ತೇವೆ. ದಾವಾ ಸ್ವತ್ತು ಈಗ ವ್ಯವಸಾಯದ ಜಮೀನಾಗಿ ಉಳಿದಿಲ್ಲ ಎಂದರೆ ಸರಿ. ವ್ಯವಸಾಯದ ಜಮೀನಿಗೆ ಕಂದಾಯ ಕಟ್ಟಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ.

ಈಗ ನನಗೆ ತೋರಿಸಿದ ಎರಡು ಫೋಟೋಗಳಲ್ಲಿ ಕಾಣುವ ಮನೆ ದಾವಾ ಸ್ವತ್ತಿನ ಮನೆ ಎಂದರೆ ಸರಿ. ಸಾಕ್ಷಿ ಫೋಟೋಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 1 ಮತ್ತು 2 ಎಂದು ಗುರುತಿಸಲಾಯಿತು. ನಿಡಿ 1 ಮತ್ತು 2 ರಲ್ಲಿ ವಿದ್ಯುತ್ ಸಂಪರ್ಕ ಇರುವುದು ಕಂಡು ಬರುತ್ತದೆ ಎಂದರೆ , ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಗೆ ವಿಧ್ಯುತ್ ಸಂಪರ್ಕ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಗೆ ನೀರಿನ ಸಂಪರ್ಕ ಇದೆ ಎಂದರೆ ಸರಿಯಲ್ಲ. ಸದರಿ ಮನೆಗೆ ವಿಧ್ಯುತ್ ಸಂಪರ್ಕ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಮನೆಗೆ ಪ್ರತಿವಾದಿ ನೀರಿನ ಸಂಪರ್ಕ ಪಡೆದು ಶುಲ್ಕ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ಮನೆ ಕಂದಾಯವನ್ನು ಪಾವತಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಗಳಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಮನೆ ಬಾಡಿಗೆಗೆ ನೀಡಿದರೆ ಈ ಬಗ್ಗೆ ಕರಾರು ಆಗಬೇಕು ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾವು ದಾವಾ ಸ್ವತ್ತನು ಬಾಡಿಗೆಗೆ ನೀಡಿದ್ದೇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ರುದ್ರಮ್ಮ ನನಗೆ ಗೊತ್ತಿಲ್ಲ. ನಮ್ಮ ಮನೆ ಮತ್ತು ಪ್ರತಿವಾದಿಯ ಮನೆ ಹತ್ತಿರದಲ್ಲೇ ಇದೆ. ಪ್ರತಿವಾದಿಯ ತಾಯಿ ನನಗೆ ಪರಿಚಯ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ರುದ್ರಮ್ಮ ಅವರು 1970 ರಲ್ಲಿ ನಂಜಶೆಟ್ಟಿ ಎಂಬುವರಿಂದ ಜಾಗವನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸುಳ್ಳು. ನಂತರ ಸದರಿ ಜಾಗದಲ್ಲಿ ಎರಡು ಗುಡಿಸಲುಗಳನ್ನು ಕಟ್ಟಿದ್ದು ಆ ಪೈಕಿ ಒಂದು ಮನೆಯನ್ನು ಅಂದರೆ ದಾವಾ ಸ್ವತ್ತನ್ನು ಪ್ರತಿವಾದಿಗೆ ಮತ್ತು ಮತ್ತೊಂದು ಮನೆಯನ್ನು ಪ್ರತಿವಾದಿಯ ಅಣ್ಣ ಸುಬ್ಬಶೆಟ್ಟಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ಅದರಂತೆ 2010 – 2011 ರಲ್ಲಿ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತಿನ ಖಾತೆ ಆಗಿದೆ ಎಂದರೆ ಸುಳ್ಳು. ಅದರಂತೆ ಪ್ರತಿವಾದಿಯು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಮುದ್ದಮ್ಮನ ಮನೆ , ದಕ್ಷಿಣಕ್ಕೆ ಕುಳ್ಳನಂಜಶೆಟ್ಟಿಯವರ ಮನೆ , ಉತ್ತರಕ್ಕೆ ನಮ್ಮ ತಂದೆ ವೆಂಕಟಮ್ಮನವರಿಗೆ ಬಾಡಿಗೆಗೆ ನೀಡಿರುವ ಮನೆ ಇರುತ್ತದೆ. ನಿಡಿ 1 ಮತ್ತು 2 ರಲ್ಲಿ ಕಾಣುವ ಮನೆ ನಾನು ಈ ಮೇಲೆ ಹೇಳಿದ ಚಕ್ಕುಬಂದಿಯ ಒಳಗೆ ಬರುತ್ತದೆ ಎಂದರೆ ಸರಿ . ಉತ್ತರಕ್ಕೆ ಇರುವ ಮನೆಯನ್ನು ವೆಂಕಟಮ್ಮನವರು ಹೊಡೆದು ಹಾಕಿ ಅಲ್ಲಿ ಹೊಸದಾಗಿ ಮನೆ ನಿರ್ಮಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆ ನನಗೆ ಸೇರದ ಕಾರಣ ನಾನು ಈ ಬಗ್ಗೆ ನೋಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಪ್ರತಿವಾದಿಯ ನಡುವೆ ಮಾಲೀಕರ ಮತ್ತು ಬಾಡಿಗೆದಾರರ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಮನೆಯನ್ನು ಕಬಳಿಸಿಕೊಳ್ಳಲು ಸುಳ್ಳು ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.